## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | | 119 |
| ಮಾನ್ಯ ಸದಸ್ಯರ ಹೆಸರು | | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 11.08.2025 |
| | **ಪ್ರಶ್ನೆ** | **ಉತ್ತರ** |
| (ಅ) | ಇಂಜಿನಿಯರಿಂಗ್ ಪದವಿ ಪಡೆದು, ನಂತರ MBA ಸ್ನಾತಕೋತ್ತರ ಪದವಿಯನ್ನು KSOU- ಕರ್ನಾಟಕ ಸ್ಟೇಟ್ ಓಪನ್ ಯುನಿವರ್ಸಿಟಿ ಮೈಸೂರು ಮುಖಾಂತರ ಪಡೆದು KEA ಅವರು ನಡೆಸುವ ಕೆ ಸೆಟ್ (KSET) ಪರೀಕ್ಷೆಯನ್ನು ಪಾಸಾಗಿರುವ ಅಭ್ಯರ್ಥಿಗಳನ್ನು ಸರ್ಕಾರಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಯಲ್ಲಿ ಪರಿಗಣಿಸಲಾಗುತ್ತಿದೆಯೇ; ಅಥವಾ ಇಲ್ಲವೇ ಇಲ್ಲದಿದ್ದಲ್ಲಿ ಸಕಾರಣವನ್ನು ತಿಳಿಸುವುದು; | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಯುಜಿಸಿ ಮಾನ್ಯತೆಯೊಂದಿಗೆ ನಡೆಸುವ ಎಲ್ಲಾ ತಾಂತ್ರಿಕೇತರ ಪದವಿಗಳನ್ನು ಅಧಿಕೃತವೆಂದು ಪರಿಗಣಿಸಲಾಗಿದ್ದು UGC Notification No. F.No. 30-30/2023 (DEB-II), Dated: 11.09.2023ರನ್ವಯ (July-August, 2023 and January-February, 2024) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ 43 ತಾಂತ್ರಿಕೇತರ ಸ್ನಾತಕ/ ಸ್ನಾತಕೋತ್ತರ ಪದವಿಗಳಿಗೆ ಮಾನ್ಯತೆ ನೀಡಲಾಗಿದೆ. ಅದರನ್ವಯ MBA ಸ್ನಾತಕೋತ್ತರ ಪದವಿಗೆ ಮಾನ್ಯತೆ ಇರುತ್ತದೆ. ಆದರೆ, KSET ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳನ್ನು ಸರ್ಕಾರಿ ಕಾಲೇಜುಗಳ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಪರಿಗಣಿಸಲು ಅಭ್ಯರ್ಥಿಯು ಆ ಹುದ್ದೆಗೆ ಅಗತ್ಯವಿರುವ ಎಲ್ಲಾ ಅರ್ಹತೆಗಳನ್ನು ಹೊಂದಿರಬೇಕಾಗಿರುತ್ತದೆ. |
| (ಆ) | IAS, KAS ಇತರೆ ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ (KSOU Mysuru) ಮುಕ್ತ ವಿಶ್ವ ವಿದ್ಯಾನಿಲಯಗಳಿಂದ ಪಡೆದ ಪದವಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತಿದೆಯೇ: | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಯುಜಿಸಿ ಮಾನ್ಯತೆಯೊಂದಿಗೆ ನಡೆಸುವ ಎಲ್ಲಾ ತಾಂತ್ರಿಕೇತರ ಪದವಿಗಳಿಗೆ ಮಾನ್ಯತೆ ನೀಡಲಾಗಿದೆ. KAS ಹಾಗೂ ಇತರೆ ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರವು ಅಧಿಸೂಚಿಸುವ ಪ್ರಕಟಣೆಯಂತೆ ಪರಿಗಣಿಸಲಾಗುತ್ತಿದೆ. |
| (ಇ) | ಇಂಜಿನಿಯರ್ ನಂತರ KSOU ಮುಖಾಂತರ MBA ಪದವಿ ಪಡೆದು KEA ಅವರು ನಡೆಸುವ K-SET ಪರೀಕ್ಷೆ ಪಾಸಾದವರನ್ನು ಸರ್ಕಾರಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತಿದೆಯೇ: ಇಲ್ಲವಾದ್ದಲ್ಲಿ, ಇದಕ್ಕೆ ಕಾರಣವೇನು? | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಯುಜಿಸಿ ಮಾನ್ಯತೆಯೊಂದಿಗೆ ನಡೆಸುವ ಎಲ್ಲಾ ತಾಂತ್ರಿಕೇತರ ಪದವಿಗಳನ್ನು ಅಧಿಕೃತವೆಂದು ಪರಿಗಣಿಸಲಾಗಿದೆ. ಆದರೆ, KSET ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳನ್ನು ಸರ್ಕಾರಿ ಕಾಲೇಜುಗಳ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಪರಿಗಣಿಸಲು ಅಭ್ಯರ್ಥಿಯು ಆ ಹುದ್ದೆಗೆ ಅಗತ್ಯವಿರುವ ಎಲ್ಲಾ ಅರ್ಹತೆಗಳನ್ನು ಹೊಂದಿರಬೇಕಾಗಿರುತ್ತದೆ. |

**ಸಂಖ್ಯೆ**: ಇಡಿ 37 ಯುಒವಿ 2025

(ಡಾ ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು